# 'ಸಂಸ್ಕೃತಿ ಪೋಷಿಸುವ ಭಾರತೀಯ ಕಲೆ'

ಯಲ್ಲಾಪುರ: 'ಮನಸ್ಸಿಗೆ ನೆಮ್ಮದಿ ಉಂಟುಮಾಡುವ ಮನರಂಜನೆ ನೀಡುವುದು ಭಾರತೀಯ ಕಲೆಗಳ ವಿಶೇಷತೆ' ಎಂದು ಸ್ವರ್ಣವಲ್ಲಿಯ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ ಅಭಿಪ್ರಾಯಪಟ್ಟರು.

ಪಟ್ಟಣದ ಗಾಂಧಿ ಕುಟೀರದಲ್ಲಿ ಬುಧವಾರ ರಾತ್ರಿ ಸಂಕಲ್ಪ ಉತ್ಸವ ಉದ್ಘಾಟಿಸಿ ಅವರು ಮಾತನಾಡಿದರು.

'ಅನೇಕ ಪಾಶ್ಚಾತ್ಯ ಕಲೆಗಳು ಮಾನಸಿಕ ವಿಕೃತಿಗೆ ಉತ್ತೇಜನ ನೀಡುತ್ತವೆ. ತಾತ್ಕಾಲಿಕ ಆಕರ್ಷಣೆಗಾಗಿ ವಿಕೃತಿಯನ್ನು ಉಂಟುಮಾಡುವ ಕಲೆಯನ್ನು ಪ್ರದರ್ಶಿಸಬಾರದು. ಸಂಸ್ಕೃತಿಗಳನ್ನು ಪೋಷಿಸುವ ಭಾರತೀಯ ಕಲೆಗಳಾದ ಯಕ್ಷಗಾನ, ಭರತನಾಟ್ಯ ಮೊದಲಾದ ಕಲೆಗಳನ್ನು ಬೆಳೆಸಬೇಕು' ಎಂದರು.

ಸಮಾಜವು ವಿಕೃತಿಯತ್ತ ಸಾಗದಂತೆ ಎಚ್ಚರ ವಹಿಸಬೇಕಾದದ್ದು ಕಲಾವಿದನ ಜವಾಬ್ದಾರಿ. ಪಾಶ್ಚಾತ್ಯ ಪ್ರಭಾವದಿಂದ ಭೋಗಲಾಲಸೆಯೇ ಪ್ರಧಾನವಾಗುತ್ತಿರುವ ಕಾರಣ ಇಂದು ನಮ್ಮಲ್ಲಿಯೂ ವಿವಾಹ ವಿಚ್ಛೇದನ ಹೆಚ್ಚುತ್ತಿವೆ ಎಂದರು.



ಯಲ್ಲಾಪುರದ ಗಾಂಧಿ ಕುಟೀರದಲ್ಲಿ ಸ್ವಣವಲ್ಲಿಯ ಗಂಗಾಧರೇಂದ್ರ ಸರಸ್ವತೀ ಸ್ವಾಮಿಗಳು ಸಂಕಲ್ಪ ಉತ್ಸವ ಉದ್ಘಾಟಿಸಿದರು. ಪ್ರಮೋದ ಹೆಗಡೆ, ಶಾಂತಾರಾಮ ಸಿದ್ದಿ, ಪ್ರಸಾದ ಹೆಗಡೆ ಇದ್ದಾರೆ

ವಿಧಾನ ಪರಿಷತ್ ಸದಸ್ಯ ಶಾಂತಾರಾಂ ಸಿದ್ದಿ ಮಾತನಾಡಿ,'ಸಂಕಲ್ಪ ಅನೇಕ ಕಲಾವಿದರ ಪ್ರತಿಭಾ ವಿಕಾಸಕ್ಕೆ ಕಾರಣವಾಗಿದೆ. ನಿರಂತರವಾಗಿ 36 ವರ್ಷಗಳ ಕಾಲ ಸಂಕಲ್ಪ ಉತ್ಸವ ಸಾವಿರಾರು ಕಲಾವಿದರಿಗೆ ವೇದಿಕೆ ಒದಗಿಸಿದೆ' ಎಂದರು.

ಸಂಕಲ್ಪ ಸೇವಾ ಸಂಸ್ಥೆಯ ಸಂಚಾಲಕ ಪ್ರಸಾದ ಹೆಗಡೆ ಮಾತನಾಡಿ, 'ಸಾಂಸ್ಕೃತಿಕವಾಗಿ ಸಮಾಜವನ್ನು ಕಟ್ಟುವ ಆಶಯ ಸಂಕಲ್ಪದ್ದು' ಎಂದು ಹೇಳಿದರು.

ರಾಮು ನಾಯಕ ಹಾಗೂ ನಾಗೇಶ ಯಲ್ಲಾಪುರಕರ ಅವರಿಗೆ ಸಂಕಲ್ಪ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಎಸ್.ಎನ್. ಭಟ್ಟ, ಬೀರಣ್ಣ ನಾಯಕ ಇದ್ದರು. ಗುರುಪ್ರಸಾಪಾದ ಭಟ್ಟ ವೇದ ಘೋಷ ನೆರವೇರಿಸಿದರು. ರವಿ ಭಟ್ಟ ವಡ್ರಮನೆ ಕಾರ್ಯಕ್ರಮ ನಿರ್ವಹಿಸಿದರು. ಪದ್ಮಾ ಪ್ರಮೋದ ಹೆಗಡೆ ಗುರುನಮನ ಸಲ್ಲಿಸಿದರು. ಆಶಾ ಭಗನಗದ್ದೆ ಸ್ವಾಗತಗೀತೆ ಪ್ರಸ್ತುತಪಡಿಸಿದರು. ದತ್ತಾತ್ರಯ ಕಣ್ಣೆಪಾಲ ವಂದಿಸಿದರು.